50) ಸರ್ಕಾರಿ ಪ್ರೌಢ ಶಾಲೆ, ರತಕಲ್, ಚಿಂಚೋಳಿ ತಾ:
51) ಸರ್ಕಾರಿ ಪ್ರೌಢ ಶಾಲೆ, ಗೋಲ, ಆಳಂದ ತಾ:ಗುಲ್ಬರ್ಗಾ ಜಿಲ್ಲೆ
52) ಸರ್ಕಾರಿ ಪ್ರೌಢ ಶಾಲೆ, ಬೈಗವಾಟ, ಮಾನ್ವಿ ತಾ:ರಾಯಚೂರು ಜಿಲ್ಲೆ
53) ಸರ್ಕಾರಿ ಪ್ರೌಢ ಶಾಲೆ, ತಾಳಕೆರೆ, ಯಲಬುರ್ಗ ತಾ:ರಾಯಚೂರು ಜಿಲ್ಲೆ
54) ಸರ್ಕಾರಿ ಪ್ರೌಢ ಶಾಲೆ, ಗಾಳಗ, ದೇವದುರ್ಗ ತಾ: ರಾಯಚೂರು ಜಿಲ್ಲೆ
55) ಸರ್ಕಾರಿ ಪ್ರೌಢ ಶಾಲೆ, ಸೈಗಾನ್ ಬಸವಕಲ್ಯಾಣ ತಾ:
56) ಸರ್ಕಾರಿ ಪ್ರೌಢ ಶಾಲೆ ಹಗರಿಗಜಾಪುರ, ಹರಪ್ಪನಹಳ್ಳಿ ತಾ:

ಬಿಜಾಪುರ ಜಿಲ್ಲೆಯ ಬದಾಮಿ ಮತ ಕ್ಷೇತ್ರದ ಆಸ್ಪತ್ರೆಗಳಿಗೆ ಔಷಧಿಗಳ ವಿತರಣೆ.

2095 - ಶ್ರೀ ಬಿ.ಜಿ. ಚಿಮ್ಮನಕಟ್ಟಿ (ಬದಾಮಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆ ಬದಾಮಿ ಮತ ಕ್ಷೇತ್ರದ ಆಸ್ಪತ್ರೆಗಳಿಗೆ ಸರಕಾರದಿಂದ ಹಾಗೂ ಜಿಲ್ಲಾ ಪಂಚಾಯತಿಯಿಂದ ನೀಡುತ್ತಿರುವ ಔಷಧಿಗಳ ಪೂರೈಕೆ ಎಷ್ಟು. (ಪ್ರತಿ ಆಸ್ಪತ್ರೆ ವಿವರ ನೀಡುವುದು).

ಆ) ಜನಸಂಖ್ಯೆಗನುಗುಣವಾಗಿ ಆಸ್ಪತ್ರೆಗಳಿಗೆ ವಿತರಣೆ ಆಗದೇ ಇರುವುದು ಹಾಗೂ ನಿಗದಿತ ಅವಧಿಯಲ್ಲಿ ಔಷಧಿಗಳ ವಿತರಣೆ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಔಷಧಿಗಳ ಸರಿಯಾದ ಪೂರೈಕೆ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ। ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬದಾಮಿ ತಾಲ್ಲೂಕು ಆಸ್ಪತ್ರೆಗಳಿಗೆ ಸರ್ಕಾರದಿಂದ ಅಂದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ನಿರ್ದೇಶನಾಲಯದ ಸರ್ಕಾರಿ ಔಷಧಿ ಮಳಿಗೆಯಿಂದ ಒಟ್ಟು ಅನುದಾನದ ಶ: 40 ರಂತೆ ಈ ಕೆಳಕಂಡಂತೆ ಔಷಧಿಗಳನ್ನು ಪೂರೈಸಲಾಗಿದೆ.

		ಬಿಡುಗಡೆಯಾದ ಅನುದಾನ	ಔಷಧಿ ವಿತರಿಸಿದ ಮೊತ್ತ
		(ರೂಗಳಲ್ಲಿ)	
1)	ಕೆರೂರು	20,000	11,583-00
2)	ಪಟ್ಟದಕಲ್	20,000	15,257-00
3)	ಕಟಗೇರಿ	20,000	6,243-00
4)	ನಂದಿಕೇಶ್ವರ	20,000	24,678-00
5)	ಬೇಲೂರು ಜಾಲಿಹಳ್ಳಿ	20,000	20,051-00
6)	ಮುನ್ವಗೇರಿ	20,000	18,492-00

7)	ಬದಾಮಿ (ಸಮುದಾಯ ಆರೋಗ್ಯಕೇಂದ್ರ)	80,000	90,906-00
8)	ಕಟಗೇರಿ ಕ್ರಾಸ್		ರೂ. 1,39,700-00 ಮೌಲ್ಯದ ಔಷಧಿಗಳನ್ನು
9)	ಕಾಕನೂರು		ವಿತರಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಒಟ್ಟಾಗಿ ಕೊಡಲಾಗಿದೆ.

ಉಳಿದ ಶೇ. 60 ರಷ್ಟು ಅನುದಾನದ ಮೊತ್ತವನ್ನು ಜಿಲ್ಲಾ ಪಂಚಾಯತಿ ಅಧಿಕಾರದ ವ್ಯಾಪ್ತಿಯಲ್ಲಿ ಖರೀದಿಸಲು ಅನುಮತಿ ಕೊಡಲಾಗಿದೆ.

ಆ) ಬಂದಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

ವಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಉರ್ದು ಶಾಲೆಗಳ ಅಭಿವೃದ್ಧಿ.

2094 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1993-94 ಹಾಗೂ 1994-95ನೇ ಸಾಲಿನಲ್ಲಿ ವಿಜಾಪುರ ಜಿಲ್ಲೆಗೆ ಪ್ರಾಥಮಿಕ ಉರ್ದು ಶಾಲೆಗಳ ಅಭಿವೃದ್ಧಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ, (ಪ್ರತಿ ತಾಲ್ಲೂಕುವಾರು ವಿವರ ನೀಡುವುದು).

ಆ) ಇದರಲ್ಲಿ ಯಾವ ಯಾವ ಬಾಬ್ತುಗಳಿಗೆ ಎಷ್ಟೆಷ್ಟು ಹಣ ವಿಚರ್ು ಮಾಡಲಾಗಿದೆ (ಪ್ರತಿ ತಾಲ್ಲೂಕು ವಿವರ ನೀಡುವುದು)

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) 1994-95ನೇ ಸಾಲಿನ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮದ ಏರಿಯಾ ಇನ್‌ಟೆನ್‌ಸೀವ್ ಯೋಜನೆಯಡಿ ವಿಜಾಪುರ ಜಿಲ್ಲೆಯಲ್ಲಿ 36 ಹೊಸ ಉರ್ದು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದೆ. ಹಾಗೂ ಇದಕ್ಕಾಗಿ ರೂ: 31.86 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಹಾಗೂ ಶಾಲೆ ಮಂಜೂರಾತಿಯ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ತಾಲ್ಲೂಕುಗಳಲ್ಲಿ ಪ್ರಾರಂಭಿಸಲಾದ ಶಾಲೆಗಳು

1) ಬಾದಾಮಿ	3 ಶಾಲೆಗಳು
2) ಬಾಗಲಕೋಟೆ	5 ಶಾಲೆಗಳು
3) ಬಸವನಬಾಗೇವಾಡಿ	2 ಶಾಲೆಗಳು
4) ಬಿಜಾಪುರ ನಗರ	3 ಶಾಲೆಗಳು
5) ಬಿಜಾಪುರ ತಾಲ್ಲೂಕು	5 ಶಾಲೆಗಳು
6) ಹುನಗುಂದ	3 ಶಾಲೆಗಳು